ಉ) ಅತಿಕ್ರಮಣ ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು, ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ನಿವೇಶಗಳ ಅವಶೇಷಗಳು ಅಧಿನಿಯಮ 1958 ಮತ್ತು ನಿಯಮಗಳು 1959ರ ಸೆಕ್ಷನ್ 38ರಡಿಯಲ್ಲಿ ಅಗತ್ಯ ಕ್ರಮಗಳನ್ನು ಸೂಕ್ತ ಹಂತದಲ್ಲಿ ಕೈಗೊಳ್ಳಲಾಗುತ್ತಿದೆ.

ಊ) ಅತಿಕ್ರಮಣದಿಂದ ತಾಸಬಾವಡಿ ಸ್ಮಾರಕವನ್ನು ಸಂರಕ್ಷಿಸಿ ಈ ಸ್ಮಾರಕದ ಸುತ್ತಲೂ ಚೈನ್ ಲಿಂಕ್ ಬೇಲಿ ಹಾಕುವ ಮತ್ತು ಲ್ಯಾಂಡ್ ಸ್ಕೇಪಿಂಗ್ ಮಾಡುವ ಸಲುವಾಗಿ ಪ್ರಾಚ್ಯವಸ್ತು. ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು 12ನೇ ಆರ್ಥಿಕ ಅನುದಾನದ ಅಡಿಯ ಕಾರ್ಯಕ್ರಮದಲ್ಲಿ ಸುಮಾರು 10.00 ಲಕ್ಷ ರೂ.ಗಳನ್ನು 2006–07ನೇ ಸಾಲಿನಲ್ಲಿ ಮೀಸಲಿಟ್ಟಿದೆ.

681(1162) ಶ್ರೀ ಬಸವಣ್ಣೆಪ್ಪ ಜೆ. (ಹೊಳೆಹೊನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಈಗ ಖಾಲಿ ಇರುವ ಸದಸ್ಯರುಗಳ ಸಂಖ್ಯೆ ಎಷ್ಟು;

ಆ) ಈ ಸ್ಥಾನಗಳು ಯಾವಾಗಿನಿಂದ ಖಾಲಿಯಾಗಿವೆ (ದಿನಾಂಕವಾರು ತಿಳಿಸುವುದು);

ಇ) ಖಾಲಿ ಇರುವ ಸ್ಥಾನಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಈ) ಈ ಸ್ಥಾನಗಳನ್ನು ಖಾಲಿ ಇಟ್ಟಿರುವುದರಿಂದ ಲೋಕ ಸೇವಾ ಆಯೋಗದ ಕಾರ್ಯನಿರ್ವಹಣೆಗೆ ತೊಂದರೆಯಾಗಿದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) 4.

ಆ) 4–3–2004, 5–10–2005, 24–4–2006 ಮತ್ತು 19–5–2006.

ಇ) ಸದ್ಯದಲ್ಲಿಯೇ.

ಈ) ಇಲ್ಲ.

682(815) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೇ;

ಆ) ಪ್ರಾರಂಭವಾಗಿದ್ದಲ್ಲಿ ಈವರೆಗಿನ ಪ್ರಗತಿಯ ಬಗ್ಗೆ ವಿವರ ಒದಗಿಸುವುದು;